ಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನೆಲ್ಲಾ ನಾವು ತೆಗೆದುಕೊಳ್ಳುತ್ತೇವೆ. ಆಮೇಲೆ ಮಾನ್ಯ ಸದಸ್ಯರಾದ ಜೆ. ಹೆಚ್. ಪಟೇಲ್‌ರವರು ಕೇಳಿರತಕ್ಕಂಥ ಪ್ರಶ್ನೆ ಗಮನ ಸೆಳೆಯುವ ಸೂಚನೆಗೆ ಸಂಬಂಧಪಡುವುದಿಲ್ಲ. ಹಿಂದೆ ನಾನು ಉತ್ತರ ಕೊಡತಕ್ಕಂಥ ಕಾಲದಲ್ಲಿ ಭದ್ರಾ ಇರಿಗೇಟೆಡ್ ಏರಿಯಾದಲ್ಲಿ ಇದು ಬರುವುದರಿಂದ ರಸ್ತೆಗಳೆಲ್ಲಾ ಹಾಳಾಗಿದೆ ಎಂದು ಹೇಳಿದ್ದೇನೆ ಮತ್ತು ಇದರ ಬಗ್ಗೆ ಕೂಡ ನಾವು ಗಮನ ಹರಿಸಿದ್ದೇವೆ ಎಂದು ಹೇಳಿದ್ದೇನೆ. ಅದೂ ಅಲ್ಲದೆ ಅವರು ಚನ್ನಗಿರಿ ತಾಲ್ಲೂಕಿನಲ್ಲಿ ಈ ರಸ್ತೆ ದುರಸ್ತಿ ಕಾರ್ಯಕ್ಕಾಗಿ ೧೨ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ, ಇದು ಸಾಲುವುದಿಲ್ಲ ಎಂದು ಹೇಳಿದ್ದಾರೆ. ಈ ವಿಷಯ ಗಮನ ಸೆಳೆಯುವ ಸೂಚನೆಯಲ್ಲಿ ಬರುವುದಿಲ್ಲ. ಅದು ಪ್ರತ್ಯೇಕ ವಿಷಯವಾಗುತ್ತದೆ. ನಾನು ಹಿಂದೆ ಉತ್ತರ ಕೊಡುವಾಗ ಈ ಚನ್ನಗಿರಿ ತಾಲ್ಲೂಕಿನಲ್ಲಿ ಇರತಕ್ಕಂಥ ಪರಿಸ್ಥಿತಿ ಇಡೀ ಕರ್ನಾಟಕ ರಾಜ್ಯದಲ್ಲಿ ಇದೆಯೆಂದು ತಿಳಿಸಿದ್ದೇನೆ. ಆದ್ದರಿಂದ ಈ ಬಗ್ಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ ಎಷ್ಟು ಹಣವನ್ನು ಕೊಡಬೇಕೆಂಬ ಬಗ್ಗೆ ನಾವು ಯೋಜನೆ ಮಾಡುತ್ತೇವೆ.

ಶ್ರೀ ಜೆ. ಎಚ್. ಪಟೇಲ್—ಈ ಬಗ್ಗೆ ಉತ್ತರ ಆಮೇಲೆ ಕೊಡಿ, ಹಣವನ್ನು ಈಗ ಕೊಡಿ.

ಶ್ರೀ ಎಸ್. ಬಂಗಾರಪ್ಪ—ನಾನು ಅರ್ಜೆಂಟಾಗಿ ಉತ್ತರ ಆ ರೀತಿ ಕೊಡಬಲ್ಲೆ ಮತ್ತು ಹಣವನ್ನು ಲೇಟಾಗಿ ಕೊಡಬಲ್ಲೆ

(*ii*) *re: Collection of land revenue at higher rates in Periyapatna taluk.*

SRI K.S. KALAMARI GOWDA(Periyapatna)—I call the attentation of the Minister for Revenue to the collection of land revenue at higher rates in Periyapatna Taluk.

ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಶಾಖೆಯ ಮಂತ್ರಿಗಳು)—ಸ್ವಾಮಿ, ನನ್ನ ಹೇಳಿಕೆ ಈ ರೀತಿ ಇದೆ.

ಕರ್ನಾಟಕ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಕಂದಾಯ ವ್ಯವಸ್ಥೆಯ ಅಪಧಿಯು ಮುಗಿದು ಹೋಗಿದ್ದು ಅದರ ಪರಿಷ್ಕರಣವು ಆಗಬೇಕಾಗಿದ್ದುದರಿಂದ ಒಟ್ಟು ೧೭೫ ತಾಲ್ಲೂಕುಗಳ ಪೈಕಿ ೧೭೨ ತಾಲ್ಲೂಕುಗಳ ಕಂದಾಯ ವ್ಯವಸ್ಥೆಯ ಪರಿಷ್ಕರಣ ಕಾರ್ಯವನ್ನು ೧ನೇ ಜುಲೈ ೧೯೬೫ ರಂದು ಜಾರಿಗೆ ತರಲಾಯಿತು. ಇನ್ನುಳಿದ ಮೂರು ತಾಲ್ಲೂಕುಗಳಲ್ಲಿ ಅಂದರೆ ಗುಲ್ಬರ್ಗ ವಿಭಾಗದ ದೇವದುರ್ಗ, ರಾಯಚೂರು ಮತ್ತು ಗಂಗಾವತಿ ತಾಲ್ಲೂಕುಗಳಲ್ಲಿ ಕಂದಾಯ ವ್ಯವಸ್ಥೆಯ ಪರಿಷ್ಕರಣ ಕಾರ್ಯವು ಹಾಲಿ ನಡೆಯುತ್ತಾ ಇದೆ. ಸದರಿ ಪರಿಷ್ಕರಣ ಕಾರ್ಯವು ಪಿರ್ಯಾಪಟ್ಟಣ ತಾಲ್ಲೂಕಿನಲ್ಲಿ ೭ನೇ ಮೇ ೧೯೭೦ರಲ್ಲಿ ಪ್ರಾರಂಭವಾಗಿ ೩೧ನೇ ಮಾರ್ಚಿ ೧೯೭೧ರಲ್ಲಿ ಪೂರ್ಣಗೊಂಡಿತು.

ಆದರೆ ೧ನೇ ಜುಲೈ ೧೯೬೫ ರಿಂದ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಜಾರಿಗೆ ಬಂದ ಪರಿಷ್ಕರಣ ದರಗಳ ಬಗ್ಗೆ ಆಕ್ಷೇಪಣೆಗಳು ಬಂದಕಾರಣ ಈ ಪರಿಷ್ಕರಣ ದರಗಳು ಸೂಕ್ತ ತಿದ್ದುಪಡಿಯಾದ ನಂತರ ೧೯೭೬ರಲ್ಲಿ ಅಂತಿಮವಾಗಿ ಒಪ್ಪಲ್ಪಟ್ಟವು. ಈ ರೀತಿ ಸೂಕ್ತ ತಿದ್ದುಪಡಿಗೊಳಲ್ಪಟ್ಟ ಪರಿಷ್ಕರಣ ದರಗಳು ಕಂದಾಯ ವರ್ಷ ೧೯೬೫-೧೯೬೬ರಿಂದ ಅನ್ವಯವಾಗುತ್ತವೆ. ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಬಂಧಿಸಿದ ಈ ರೀತಿ ತಿದ್ದುಪಡಿಗೆ ಒಳಪಟ್ಟ ಪರಿಷ್ಕರಣ ದರಗಳನ್ನು ಸೂಚಿಸುವ ತಃಖ್ತೆಯನ್ನು ಇದಕ್ಕೆ ಲಗತ್ತಿಸಿದೆ ಇದರಿಂದ ಈ ಎರಡು ತಾಲ್ಲೂಕುಗಳಲ್ಲಿ ಈ ರೀತಿ ಹೆಚ್ಚಿಗೆಯಾದ ಭೂ ಕಂದಾಯ ಎರಡರಷ್ಟಕ್ಕಿಂತ ಜಾಸ್ತಿ ಇಲ್ಲದೆ ಇರುವುದನ್ನು ಕಾಣಬಹುದು. ಆದುದರಿಂದ ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೆಚ್ಚಿಸಲ್ಪಟ್ಟ ಭೂಕಂದಾಯವನ್ನು ವಜಾ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹಿಂದಿನ ಹಾಗೂ ಪ್ರಸಕ್ತ ಜಮೀನು ಕಂದಾಯದ ಪ್ರಮಾಣಭೂತ ದರಗಳ ತಃಖ್ತೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕು ಹೆಸರು	ಗ್ರೂಪ್‌ಗಳು		ಹಿಂದಿನ ಪ್ರಮಾಣ ಭೂತ ದರ			ಈಗಿನ ಪ್ರಮಾಣ ಭೂತ ದರ			ಷರಾ.
			ಹಿಂದಿನ ಕಂದಾಯ ವ್ಯವಸ್ಥೆಯಲ್ಲಿ	ಈಗಿನ ಕಂದಾಯ ವ್ಯವಸ್ಥೆಯಲ್ಲಿ	ಖುಷ್ಕಿ	ತರಿ	ಬಾಗಾಯ್ತು	ಖುಷ್ಕಿ	ತರಿ	ಬಾಗಾಯ್ತು	
೧.	ಮೈಸೂರು	ಪಿರಿಯಾಪಟ್ಟಣ	I	I	೨-೦೦ T	೭-೦೦	೧೨-೦೦	೩-೯೫	೧೪-೦೦	೧೫-೦೦	
			II	II	೧-೫೬ CH_1	೧-೫೦		೩-೦೦	೧೦-೦೦	೧೫-೦೦	
				III	T.	೬-೫೦		೨-೮೫	೧೨-೦೦	೧೩-೦೦	
					Ch.	೯-೦೦					
				IV				೨-೫೦	೧೦-೦೦	೧೩-೦೦	

T—Tank ಕೆರೆ

CH—Channel ಕಾಲುವೆ

ಸರ್ಕಾರದ ಆರ್ಡಿನೆನ್ಸ್ ನಂ. ೩, ತಾ॥ ೨೯ನೇ ಜೂನ್ ೧೯೭೩ರ ಪ್ರಕಾರ ಖುಷ್ಕಿ ಕಂದಾಯವು ಶೇಕಡ ೧೦೦ಕ್ಕಿಂತ ಹೆಚ್ಚಿಸಲಾಗದು.

ಶ್ರೀ ಕೆ. ಎಸ್. ಕಾಳಮರಿಗೌಡ.—ಸ್ವಾಮಿ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಭೂಕಂದಾಯವನ್ನು ವಸೂಲು ಮಾಡುತ್ತಿರುವುದು ಒಂದಕ್ಕೆ ಎರಡರಷ್ಟು, ಮೂರರಷ್ಟು ನಾಲ್ಕರಷ್ಟು ಜಾಸ್ತಿಯಾಗಿಲ್ಲ ಎಂದು ತಾವು ಹೇಳಿದ್ದೀರಿ. ನಾನು ಹಿಂದೆ ಈ ಬಗ್ಗೆ ತಮಗೆ ಸ್ಟಾರ್ಡ್ ಕೊಶ್ಚನ್ ಕಳಿಸಿದಾಗಲೂ ಕೂಡ ತಾವು ಇದೇ ಉತ್ತರವನ್ನು ಹೇಳಿದ್ದೀರಿ ಈ ತಾಲ್ಲೂಕಿನಲ್ಲಿ ನಾವು ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ವಿಲೇಜ್ ಆಕೌಂಟೆಂಟ್‌ರವರು ಒಂದಕ್ಕೆ ನಾಲ್ಕರಷ್ಟು, ಐದರಷ್ಟು ಭೂಕಂದಾಯವನ್ನು ವಸೂಲು ಮಾಡುತ್ತಿದ್ದುದನ್ನು ನಾವು ನೋಡಿದ್ದೇವೆ. ಇದಕ್ಕೆ ದಾಖಲಾತಿಗಳ ಸಮೇತನಾನು ವಿವರವನ್ನು ಒದಗಿಸಿಕೊಡುತ್ತೇನೆ. ಈ ವಿಚಾರ ತಮಗೆ ತಿಳಿಯುವುದರಲ್ಲಿ ತಡವಾಗಿರಬಹುದು. ೧೯೭೫ನೇ ಇಸವಿಯಲ್ಲಿ ಪಿರಿಯಾಪಟ್ಟಣ ಮತ್ತು ಹುಣಸೂರು ತಾಲ್ಲೂಕಿನವರು ಲ್ಯಾಂಡ್ ರೆವೆನ್ಯೂ ಜಾಸ್ತಿಯಾಗಿದೆ ಎನ್ನುತಕ್ಕಂಥ ವಿಷಯವನ್ನು ತಮ್ಮ ಗಮನಕ್ಕೆ ತಂದಾಗ ಸರ್ಕಾರದವರು ಅದನ್ನು ಪುನರ್ ಪರಿಶೀಲನೆ ಮಾಡಿ ೧೯೭೬ರಲ್ಲಿ ಒಂದು ಪರಿಷ್ಕರಣ ದರವನ್ನು ಕೊಟ್ಟಿದ್ದಾರೆ ಆದರೆ ನಾನು ಕೇಳುವುದು, ೧೯೭೦ರಲ್ಲಿ ಕೊಟ್ಟಂಥ ಪರಿಷ್ಕರಣ ದರದ ಪ್ರಕಾರ ಲ್ಯಾಂಡ್ ರೆವೆನ್ಯೂವನ್ನು ವಸೂಲು ಮಾಡುತ್ತಿದ್ದಾರೆಯೋ ಅಥವಾ ೧೯೭೬–೭೭ ರಲ್ಲಿ ಆದಂಥ ಪರಿಷ್ಕರಣ ದರದ ಪ್ರಕಾರ ಅದನ್ನು ವಸೂಲು ಮಾಡುತ್ತಿದ್ದಾರೆಯೋ ? ಈ ಬಗ್ಗೆ ತಾವು ಉತ್ತರ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ —ಸ್ವಾಮಿ, ಮಾನ್ಯ ಸದಸ್ಯರು ಹಿಂದೆ ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಈಗ ಪುನಃ ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಪುನಃ ಅದನ್ನೇ ಹೇಳಬೇಕಾಗಿದೆ. ಹಿಂದೆ ಪಿಷ್ಕಿ ಜಮೀನಿಗೆ ೨ ರೂಪಾಯಿ ಭೂಕಂದಾಯ ಇದ್ದುದನ್ನು ಈಗ ರೂ. ೩–೪೫ ಪೈಸೆಯಷ್ಟು ಮಾಡಿದ್ದೇವೆ. ಹಿಂದೆ ತರಿ ಜಮೀನಿಗೆ ೭ ರೂಪಾಯಿ ಇದ್ದುದನ್ನು ಈಗ ೧೪ ರೂಪಾಯಿ ಮಾಡಿದ್ದೇವೆ. ಬಾಗಯಿತು ಜಮೀನಿಗೆ ೧೨ ರೂಪಾಯಿ ಇದ್ದುದನ್ನು ಈಗ ೧೫ ರೂಪಾಯಿ ಮಾಡಿದ್ದೇವೆ. ಪಿಷ್ಕಿ ಜಮೀನಿಗೆ ೧ ರೂಪಾಯಿ ೫೦ ಪೈಸೆ ಇದ್ದಕಡೆ ಈಗ ೩ ರೂಪಾಯಿ ಮಾಡಿದ್ದೇವೆ. ನಂತರ ತರೀ ಜಮೀನಿಗೆ ೧೧ ರೂ. ೫೦ ಪೈಸೆ ಇದ್ದುದನ್ನು ೧೦ ರೂಪಾಯಿಗೆ ಕಡಿಮೆ ಮಾಡಿದ್ದೇವೆ. ಟಿ. ಟ್ಯಾಂಕ್ ತರೀ ಜಮೀನಿಗೆ ೬ ರೂಪಾಯಿ ೫೦ ಪೈಸೆ ಇದ್ದುದನ್ನು ೧೨ ರೂಪಾಯಿ ಮಾಡಿದ್ದೇವೆ. ಬಾಗಾಯಿತು ಜಮೀನಿಗೆ ೧೨ ರಿಂದ ೧೩ ರೂಪಾಯಿ ಮಾಡಿದ್ದೇವೆ. ಈ ದರಗಳನ್ನೆಲ್ಲಾ ತಖ್ತೆಯಲ್ಲಿ ಕೊಟ್ಟಿದೆ. ಬಹುಶಃ ಇದರಲ್ಲಿ ಯಾರು ಜಾಸ್ತಿ ಲ್ಯಾಂಡ್ ರೆವಿನ್ಯೂ ಕೊಡಬೇಕೆಂದು ಕೇಳುತ್ತಾರೆಯೋ ಆ ಪ್ರಕಾರ ಅವರು ಕೊಡುತ್ತಿದ್ದಾರೆ ಎಂದು ನನಗನ್ನಿಸುತ್ತದೆ. ಲ್ಯಾಂಡ್ ರೆವೆನ್ಯೂ ಆಕ್ಟ್ ಪ್ರಕಾರ ಯಾರು ಜಾಸ್ತಿ ಕಂದಾಯವನ್ನು ಕೊಡುತ್ತಿದ್ದಾರೆ ಅವರು ಅಪೀಲ್ ಹೋಗಿ ಅದನ್ನು ಕಡಿಮೆ ಮಾಡಿಸಿಕೊಳ್ಳಬಹುದಾಗಿದೆ. ತಾವು ಹೇಳುತ್ತಿದ್ದೀರಿ ನಮ್ಮ ಅಧಿಕಾರಿಗಳು ತಮ್ಮ ತಾಲ್ಲೂಕಿನಲ್ಲಿ ಹೆಚ್ಚು ಭೂಕಂದಾಯವನ್ನು ವಸೂಲು ಮಾಡುತ್ತಿದ್ದಾರೆ ಎಂದು. ನಾನು ಹೇಳುತ್ತೇನೆ ಅವರು ಹೆಚ್ಚು ಭೂಕಂದಾಯವನ್ನು ವಸೂಲು ಮಾಡುತ್ತಾ ಇಲ್ಲ. ಕರ್ನಾಟಕರಾಜ್ಯದ ಯಾವ ಭಾಗದಿಂದಲೂ ಈ ರೀತಿಯ ದೂರುಗಳು ಬಂದಿಲ್ಲ. ಆದರೆ ತಾವು ಪಿರಿಯಾಪಟ್ಟಣದಲ್ಲಿ ಆ ರೀತಿ ಹೆಚ್ಚು ವಸೂಲು ಮಾಡುತ್ತಿದ್ದಾರೆಂದು ಹೇಳುತ್ತಿದ್ದೀರಿ. ಇದಕ್ಕೆ ಕಾರಣ ಏನು ಎಂಬುದು ನನಗೆ ಗೊತ್ತಿಲ್ಲ. ನಾನು ಇಷ್ಟನ್ನು ಮಾತ್ರ ಹೇಳಬಲ್ಲೆ. ಮಾನ್ಯಸದಸ್ಯರು ಅಂತಹ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ನಾನು ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

MATTERS UNDER RULE 312

(i) *re : Delivery by a woman outside the labour ward at KCG Hospital Malleswaram.*

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೧೦ನೇ ಆಗಸ್ಟ್ ೧೯೭೮ ರಲ್ಲಿ ಮಲ್ಲೇಶ್ವರದ ಕೆ. ಸಿ. ಜನರಲ್ ಆಸ್ಪತ್ರೆಯ ಲೇಬರ್ ವಾರ್ಡ್‌ನ ಹೊರಗಡೆ ಪುಟ್‌ಪಾತ್‌ನಲ್ಲಿ ಒಬ್ಬ ಮಹಿಳೆಗೆ ಹೆರಿಗೆಯಾದ ಪ್ರಸಂಗದ ಬಗ್ಗೆ ನಾನು ಮಾನ್ಯಮಂತ್ರಿಯವರನ್ನು ವಿವರ ಕೇಳುತ್ತಿದ್ದೇನೆ. ಸ್ವಾಮಿ, ಬೈರಮ್ಮ ಎಂಬ ಒಬ್ಬ ರೈತಾಪಿ ಮಹಿಳೆ ಮಾದಾವರ ಹಳ್ಳಿಯಿಂದ ಹೆರಿಗೆಗೋಸ್ಕರ ಕೆ. ಸಿ. ಜನರಲ್ ಆಸ್ಪತ್ರೆಗೆ ರಾತ್ರಿ ಹೊತ್ತಿನಲ್ಲಿ ಬಂದಳು. ಆಗ ಅವಳಿಗೆ ಹೆರಿಗೆ ನೋವು ಪ್ರಾರಂಭವಾಗಿತ್ತು. ಇಂಥಾ ಒಂದು ಕರುಣಾಜನಕ ಸ್ಥಿತಿ, ಇದರಲ್ಲಿ ಅಲ್ಲಿಯ ವೈದ್ಯರ, ನರ್ಸಗಳ ಕ್ರೌರ್ಯ ಮನೋಭಾವ ಅಡಕ